ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 29-03-2025 ರಂದು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಕೆ ಜಿವಕೀಲರಿಂದಃ

ನನ್ನ ವಾದ ಪತ್ರದ 6 ನೇ ಪ್ಯಾರಾದಲ್ಲಿ ನಮೂದು ಮಾಡಿರುವ ಸಂಗತಿಗಳು ಸರಿ ಇದೆ. ದಾವಾ ಬಿ ಶೆಡ್ಯೂಲ್ ಆಸ್ತಿಯು 3 ನೇ ಪ್ರತಿವಾದಿಯ ಕಬ್ಜಾ ವೈವಾಟಿಯಲ್ಲಿ ಇದೆ ಎಂದರೆ ಸರಿ.ದಾವಾ ಎ ಶೆಡ್ಯೂಲ್ ಆಸ್ತಿಯು ನನ್ನ ತಂದೆಯ ಕಬ್ಜಾ ದಲ್ಲಿ ಇಲ್ಲ ಎಂದರೆ ಸರಿ. ದಾವಾ ಎ ಶೆಡ್ಯೂಲ್ ಆಸ್ತಿಯು 1 ನೇ ಪ್ರತಿವಾದಿಯ ಕಬ್ಜಾ ವೈವಾಟಿಯಲ್ಲಿ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರಿಗೆ ಹಿಸ್ಸೆ ಮಾಡಿಕೊಟ್ಟಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ದಾವಾ ಎ ಶೆಡ್ಯೂಲ್ ಆಸ್ತಿಯನ್ನು 1 ನೇ ಪ್ರತಿವಾದಿಯ ಗಂಡನಿಗೆ ನನ್ನ ತಂದೆಯು ಹಿಸ್ಸೆ ಮಾಡಿಕೊಟ್ಟಿರುತ್ತಾರೆ ಆನಂತರ 1 ಮತ್ತು 2 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ಸಹೋದರನಾದ ಗಣೇಶ ರಾಮಚಂದ್ರ ಹೆಗಡೆ ಮರಣ ಹೊಂದಿದ ನಂತರ ದಾವಾ ಎ ಶೆಡ್ಯೂಲ್ ಆಸ್ತಿಗಳು 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ವಾರಸಾ ನಾತೆಯಿಂದ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ಈಗಲೂ ಕೂಡ ದಾವಾ ಎ ಶೆಡ್ಯೂಲ್ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಂತತ್ರ ಕಬ್ಜಾದಲ್ಲಿ ಇದೆ ಎಂದರೆ ಸರಿ. ನನ್ನ ತಂದೆಯವರು 1 ನೇ ಪ್ರತಿವಾದಿಯ ಗಂಡನಿಗೆ ಹಿಸ್ಸೆ ಮಾಡಿ ದಾವಾ ಎ ಶೆಡ್ಯೂಲ್ ಆಸ್ತಿಗಳನ್ನು ಬಿಟ್ಟುಕೊಟ್ಟ ನಂತರ 1 ನೇ ಪ್ರತಿವಾದಿಯು ಬಹಳಷ್ಟು ಹಣ ಖರ್ಚು ಮಾಡಿ ಅದನ್ನು ಅಭಿವೃದ್ಧಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಯಾವುದೇ ವಿಭಾಗ ಮಾಡಿರುವುದಿಲ್ಲ ಹಾಗೂ ಅವರು ಯಾವುದೇ ಅಭಿವೃದ್ಧಿ ಮಾಡಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ.

ದಾವಾ ಎ ಶೆಡ್ಯೂಲ್ ಆಸ್ತಿಗಳಿಗೆ ಸಂಬಂದಿಸಿದಂತೆ ಪಹಣಿ ಪತ್ರಗಳನ್ನು ನನ್ನ ತಮ್ಮ ಮರಣ ಹೊಂದಿದ ನಂತರ ನೋಡಿರುತ್ತೇನೆ. ನನ್ನ ತಮ್ಮನ ಆದ ಹೆಸರಿಗೆ ಆದ ಎಂಟ್ರಿಯನ್ನು ಸಂಬಂದಪಟ್ಟ ಪ್ರಾಧಿಕಾರಕ್ಕೆ ನಾನು ಪ್ರಶ್ನೆ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ದಾವಾ ಎ ಶೆಡ್ಯೂಲ್ ಆಸ್ತಿಗಳನ್ನು ವಿಭಾಗದ ಮೂಲಕ ನನ್ನ ತಮ್ಮನಿಗೆ ಕೊಟ್ಟಿದ್ದಾಗಿರುವುದಿಲ್ಲ ನನ್ನ ತಂದೆಯವರಿಗೆ ಗಾಡಿಯನ್ನು ಚಲಾಯಿಸಲು ಆಗದೇ ಇದ್ದ ಕಾರಣ ದಾವಾ ಎ ಶೆಡ್ಯೂಲ್ ಆಸ್ತಿಗಳನ್ನು ನೋಡಿಕೊಳ್ಳುವ ಕಾರಣಕ್ಕಾಗಿ ಅವುಗಳನ್ನು ಆತನ ಹೆಸರಿಗೆ ತಾತ್ಕಾಲಿಕವಾಗಿ ಬರೆದುಕೊಟ್ಟಿರುತ್ತಾರೆ ಆದರೆ ಅದು ನಮ್ಮ ಪಿತ್ರಾರ್ಜಿತ ಆಸ್ತಿ ಆಗಿರುವ ಕಾರಣ ನನಗೂ ಕೂಡ ಹಕ್ಕು ಇರುತ್ತದೆ. ನನ್ನ ತಂದೆಯವರು ನನ್ನ ತಮ್ಮನಿಗೆ ಆಸ್ತಿಗಳನ್ನು ಬರೆದುಕೊಟ್ಟಿರುವ ವಿಷಯ ನನ್ನ ತಮ್ಮ ಮರಣ ಹೊಂದಿದ ನಂತರ ನನಗೆ ಗೊತ್ತಾಗಿರುತ್ತದೆ. ನನ್ನ ತಂದೆಯವರು ದಾವಾ ಎ ಶೆಡ್ಯೂಲ್ ಆಸ್ತಿಗಳನ್ನು

ವಿಭಾಗ ಮಾಡಿ ನನ್ನ ತಮ್ಮನ ಹಿಸ್ಸೆಗೆ ಕೊಟ್ಟಿರುವುದು ನನಗೆ ಗೊತ್ತಿದ್ದರೂ ಸಹಿತ 1 ಮತ್ತು 2 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಬಿ ಶೆಡ್ಯೂಲ್ ಆಸ್ತಿಯು ಅಡಿಕೆ ತೋಟ ಆಗಿರುವುದಿಲ್ಲ ಅದು ಗದ್ದೆ ಜಮೀನು ಆಗಿರುತ್ತದೆ ಸದರಿ ದಾವಾ ಬಿ ಶೆಡ್ಯೂಲ್ ಆಸ್ತಿಯಲ್ಲಿ 8-10 ಅಡಿಕೆ ಮರಗಳು ಇವೆ. ನನ್ನ ತಮ್ಮ ಮರಣ ಹೊಂದಿದ ನಂತರ 1 ಮತ್ತು 2 ನೇ ಪ್ರತಿವಾದಿಯರನ್ನು ಹೇಗಾದರೂ ಮಾಡಿ ಮನೆಯಿಂದ ಹೊರಹಾಕುವ ಸಲುವಾಗಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಬಿ ಶೆಡ್ಯೂಲ್ ಆಸ್ತಿಯಲ್ಲಿ ಯಾವುದೇ ಆದಾಯ ಇರುವುದಿಲ್ಲ. ದಾವಾ ಎ ಶೆಡ್ಯೂಲ್ ಆಸ್ತಿಯಲ್ಲಿ ನನ್ನ ತಂದೆಯವರು ಸಾಗುವಳಿ ಮಾಡುವ ಕಾಲಕ್ಕೆ 24 ಕ್ವಿಂಟಲ್ ಅಡಿಕೆ ಬರುತ್ತಿತ್ತು. ಆನಂತರ ನನ್ನ ತಮ್ಮ ಬೆಳೆಯನ್ನು ಬೆಳೆಯುತ್ತಿದ್ದು, ಆತನು ಯಾವುದೇ ಅಡಿಕೆಯನ್ನು ನನ್ನ ತಂದೆಗೆ ಕೊಡುತ್ತಿರಲಿಲ್ಲ. ದಾವಾ ಎ ಶೆಡ್ಯೂಲ್ ಆಸ್ತಿಯಲ್ಲಿ ಎಷ್ಟು ಆದಾಯ ಬರುತ್ತದೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ತಮ್ಮ 2002 ರಿಂದ ದಾವಾ ಎ ಶೆಡ್ಯೂಲ್ ಆಸ್ತಿಯಲ್ಲಿ ಬೆಳೆಯನ್ನು ಕೊಯ್ಯುತ್ತಿದ್ದಾನೆ. ನನ್ನ ತಮ್ಮನ ಹೆಸರಿಗೆ ದಾವಾ ಎ ಶೆಡ್ಯೂಲ್ ಆಸ್ತಿಗಳು ವರ್ಗಾವಣೆ ಆದಾಗಿನಿಂದ ಆತನೆ ವೈವಾಟ ಮಾಡಿಕೊಂಡು ಬರುತ್ತಿದ್ದಾನೆ ಎಂದರೆ ಸರಿ. 2021 ರಲ್ಲಿ 3 ನೇ ಪ್ರತಿವಾದಿ ಹಾಗೂ ನನ್ನ ತಮ್ಮನ ನಡುವೆ ವಿಭಾಗವಾಗಿದ್ದು ನನ್ನ ತಮ್ಮನಿಗೆ ದಾವಾ ಎ ಶೆಡ್ಯೂಲ್ ಆಸ್ತಿ ಹಾಗೂ ನನ್ನ ತಂದೆಗೆ ದಾವಾ ಬಿ ಶೆಡ್ಯೂಲ್ ಆಸ್ತಿ ಬಂದಿರುತ್ತದೆ ಎಂದರೆ ಸರಿಯಲ್ಲ. ಈ ವಿಚಾರ ನನಗೆ 2021 ರಲ್ಲಿ ನನ್ನ ತಮ್ಮ ಮರಣ ಹೊಂದಿದ ನಂತರ ಗೊತ್ತಾಗಿರುತ್ತದೆ.

1 ಮತ್ತು 2 ನೇ ಪ್ರತಿವಾದಿ ಈಗ ಶಿರಾಳಕೊಪ್ಪದಲ್ಲಿ ವಾಸಮಾಡುತ್ತಿದ್ದಾರೆ. ದಾವಾ ಸಿ ಶೆಡ್ಯೂಲ್ ಆಸ್ತಿ ಮನೆಯ ಉದ್ದ ಹಾಗೂ ಅಗಲ ನನಗೆ ಗೊತ್ತಿಲ್ಲ. ದಾವಾ ಸಿ ಶೆಡ್ಯೂಲ್ ಮನೆಯು ಹಂಚಿನ ಮನೆ ಆಗಿರುತ್ತದೆ ಹಾಗೂ ಅದು ಬಿಳುವ ಸ್ಥಿತಿಯಲ್ಲಿ ಇರುತ್ತದೆ. ದಾವಾ ಸಿ ಶೆಡ್ಯೂಲ್ ಮನೆಯು ಆರ್ ಆರ ಸಿ ಸಿ ಮನೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವಾ ಸಿ ಶೆಡ್ಯೂಲ್ ಮನೆಯು ಬಿಳುವ ಸ್ಥಿತಿಯಲ್ಲಿ ಇಲ್ಲದೇ ಇದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿಃ 03-01-2022 ರ ದಾವಾ ಸಿ ಶೆಡ್ಯೂಲ್ ಮನೆಗೆ ಸಂಬಂದಪಟ್ಟಂತಹ ತೆರಿಗೆ ಪಾವತಿ ರಶೀಧಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಡಿ-1 ಎಂದು ಗುರುತಿಸಲಾಯಿತು. ನನ್ನ ತಮ್ಮ ಹಾಗೂ ನನ್ನ ತಂದೆಯ ನಡುವೆ ಹಿಸ್ಸೆಯಾಗುವ ಪೂರ್ವದಲ್ಲಿ ಎಲ್ಲಾ ಆಸ್ತಿಗಳ ದೆಖರೆಕ ನ್ನು ನನ್ನ ತಂದೆಯವರೇ ನೋಡಿಕೊಳ್ಳುತ್ತಿದ್ದರು ಎಂದರೆ ಯಾವುದೇ ಹಿಸ್ಸೆ

ಆಗಿರಲಿಲ್ಲ ಅದರ ಪೂರ್ವದಲ್ಲಿ 1 ನೇ ಪ್ರತಿವಾದಿಯೇ ಎಲ್ಲಾ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದನು. ನನ್ನ ತಮ್ಮನ್ನು ದಾವಾ ಎ ಶೆಡ್ಯೂಲ್ ಆಸ್ತಿಗಳ ದೆಖ ರೆಕ್ ಗಳನ್ನು ಹಿಂದಿನಿಂದಲೂ ನೊಡಿಕೊಳ್ಳುತ್ತಿದ್ದನು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನನಗೆ ದಾವಾಸ್ತಿಗಳ ಮೇಲೆ ಹಕ್ಕು ಇಲ್ಲದೇ ಇದ್ದರೂ ಕೂಡ 1 ಮತ್ತು 2 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ನಿ.ಪಿ-13 ರಲ್ಲಿ ನನ್ನ ತಮ್ಮ ಮತ್ತು ನನ್ನ ತಂದೆಯಾದ 3 ನೇ ಪ್ರತಿವಾದಿಯರ ನಡುವೆ ವಿಭಾಗ ಆಗಿರುತ್ತದೆ ಎಂದು ನಮೂದು ಇರುವುದು ಸರಿ ಇರುವುದಿಲ್ಲ. ಹಿಸ್ಸೆ ಆದ ನಂತರ ನಿ.ಪಿ-13 ರಂತೆ ಮ್ಯೂಟೇಶನ್ ಎಂಟ್ರಿ ಜಾರಿಗೆ ಬಂದಿರುತ್ತದೆ.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ.**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**